Spl.C. 3/2020.

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ: 3/2020.**

| | | | |
|---|---|---|---|
| ಹೆಸರು | : | ಮಲೆವ್ವ ಗಾಡಿನವರ | ಫ್ರಾಸಾ-15 |
| ತಂದೆಯ ಹೆಸರು | : | ಹಣಮಂತ | ಚಾಸಾ-27 |
| ವಯಸ್ಸು | : | 32 ವರ್ಷ | |
| ಉದ್ಯೋಗ | : | ಮನೆಗೆಲಸ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ | |

ದಿನಾಂಕಃ 12-06-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನ್ಯಾಯಾಲಯದ ಮುಂದಿರುವ ಆರೋಪಿತರು ಪರಿಚಯ. ಚಾಸಾ-1 ರಿಂದ 3, 16, 18 ರಿಂದ 26 ನನ್ನ ಸಂಬಂಧಿಕರು. ಚಾಸಾ-4 ನನ್ನ ಗಂಡ. ಚಾಸಾ-17 ನನ್ನ ಮಗಳು.

ದಿನಾಂಕಃ 15-10-2019 ರಂದು ನಾನು ಮನೆಯಲ್ಲಿದ್ದೆ. ನನ್ನ ಮಗಳು ಮಧ್ಯಾಹ್ನ 2.00 ಗಂಟೆಗೆ ಅಜ್ಜನ ಮನೆಗೆ ಹೋಗುತ್ತೇನೆ ಅಂತಾ ಹೋದಳು. ನಾನು ಮನೆಗೆಲಸ ಮಾಡಿಕೊಂಡು ಮನೆಯಲ್ಲಿದ್ದೆ. ಸಂಜೆ 4.00 ಗಂಟೆ ಸುಮಾರಿಗೆ ಪಕ್ಕದ ಮನೆಯವರು ನಿಮ್ಮ ಚಿಕ್ಕಪ್ಪ ಮಲೆಪ್ಪ ಹಾಗೂ ವಿಠ್ಠಲ ಇವರಿಗೆ ಅಪಘಾತವಾಗಿದೆ ಅಂತಾ ಹೇಳಿದರು. ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಅವರನ್ನು ಕೊಚ್ಚಿ ಕೊಲೆ ಮಾಡಿದ್ದರು. ವಿಠ್ಠಲ ಇವನ ಬಲಕುತ್ತಿಗೆ, ಬಲಕೈ ಯನ್ನು ಕಡಿದಿದ್ದರು. ನಂತರ ಮಲೆಪ್ಪನ ಎಡಕುತ್ತಿಗೆ ಕಡಿದಿದ್ದರು. ಅವನು ಕಲ್ಲೋಳಿ ರೋಡಿನಲ್ಲಿ ಅಂಗಾತ ಬಿದ್ದಿದ್ದ ರಕ್ತ ರೋಡಿನಲ್ಲಿ ಹರಿದಾಡುತ್ತಿತ್ತು. ವಿಠ್ಠಲನ ಶವ ಕೆನಾಲನ ಕಂಟಿಯಲ್ಲಿ ಬಿದ್ದಿತ್ತು. ಚಪ್ಪಲಿ, ಪೋನ ಹಾಗೂ ಗಾಡಿ ಬಿದ್ದಿದ್ದವು. ಬಿಳಿ ಬಟ್ಟೆ ರಕ್ತವಾಗಿತ್ತು. ನಂತರ ನನ್ನ ಮಗಳು ಬಂದು ಮಲೆಪ್ಪ ಮತ್ತು ವಿಠ್ಠಲನನ್ನು ಅಟ್ಟಾಡಿಸಿ ಕಡಿಯುತ್ತಿದ್ದರು. ನಾನು ರೇಖಾ ಮತ್ತು ಕಾಂಚನಾ ಪೂಲ್ ಹತ್ತಿರ ಮರೆಮಾಚಿಕೊಂಡು ಕುಳಿತು ನೋಡಿದ್ದೇವೆ ಅಂತಾ ಹೇಳಿದಳು. ಅವರು 13 ಜನರು ಇದ್ದರು ಎಂದು ಅವರ ಹೆಸರು 1.

ಅರುಣ ನಾಗರೆಡ್ಡಿ, 2. ಮಹೇಶ ನಾಗರೆಡ್ಡಿ, 3. ಸಿದ್ದು ನಾಗರೆಡ್ಡಿ, 4. ಲಕ್ಷ್ಮಣ ಜಕ್ಕನ್ನವರ, 5. ವಿಠ್ಠ ಗಣಗಲ್, 6. ಮಲ್ಲಪ್ಪ ಹುದ್ದಾರ, 7. ಶಂಕ್ರಪ್ಪ ಗುಡದಿನ್ನಿ, 8. ರಾಜು ಬಾಡಗಿ ಇತರರು ಎಂದು ಹೇಳಿದಳು. ಉಳಿದವರ ಹೆಸರು ನೆನಪಿಲ್ಲ. ಅವರು ಕಾರ ಗಾಡಿಯಲ್ಲಿ ಬಂದು ಡಿಕ್ಕಿ ಮಾಡಿ ಕಾರ ಗಾಡಿ ಹತ್ತಿ ಕೆನಾಲ್ ಕಡೆಗೆ ಹೋದರು ಎಂದು ಹೇಳಿದಳು.

ಕೊಲೆಯನ್ನು ಜಾತಿನಿಂದನೆ ಕಾರಣಕ್ಕಾಗಿ ಮಾಡಿದ್ದಾರೆ. ಮೇ ತಿಂಗಳಲ್ಲಿ ಚಾಸಾ-1 ರ ತಲೆಯನ್ನು ಇದೇ 13 ಜನರು ತಲ್ವಾರನಿಂದ ಕಡಿದಿದ್ದರು ಹಾಗೂ 3 ಮನೆಗಳನ್ನು ಒಡೆದಿದ್ದರು. ಆ ಬಗ್ಗೆ ಕೇಸು ಮಾಡಿದ್ದು ಅವರೆಲ್ಲರೂ ಜಾಮೀನಿನ ಮೇಲೆ ಬಂದು ಕೊಲೆ ಮಾಡಿದ್ದಾರೆ. ಆ ಬಗ್ಗೆ ನಮಗೆ ಭಯವಿತ್ತು. ಈಗಲೂ ಭಯವಿದೆ.

ನಿಪಿ-5 ರಿಂದ 8, 40 ರಿಂದ 45 ಫೋಟೋಗಳನ್ನು ನೋಡಿ ಗುರುತಿಸಿದ್ದೇನೆ. ಮುಮಾ-1 ರಿಂದ 4, 12, 13, 17 ನೋಡಿ ಗುರುತಿಸಿದ್ದೇನೆ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ದಿನಾಂಕಃ 30-11-2019 ರಂದು ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ನಾವು ಸ್ಥಳಕ್ಕೆ ಹೋದಾಗ ಕಾಂಚನಾ ಮತ್ತು ರೇಖಾ ಸ್ಥಳದಲ್ಲಿ ಅಡಗಿಕೊಂಡು ಕುಳಿತಿದ್ದರು, ಅಟ್ಟಾಡಿಸಿ ಹೊಡೆದರು ಎಂಬ ವಿಷಯನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ, ಆದರೆ ಪೋಲಿಸರು ಬರೆದುಕೊಂಡಿಲ್ಲ ಹಾಗೂ 13 ಜನರ ಹೆಸರುಗಳನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ, ಆದರೆ ಪೋಲಿಸರು ಬರೆದುಕೊಂಡಿಲ್ಲ. 13 ಜನರು ಕಾರನಲ್ಲಿ ಬಂದು ಡಿಕ್ಕಿ ಹೊಡೆಸಿ ಕೆನಾಲ್ ಕಡೆಗೆ ಕಾರನಲ್ಲಿ ಹೋದರು ಎಂಬ ವಿಷಯನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ, ಆದರೆ ಪೋಲಿಸರು ಬರೆದುಕೊಂಡಿಲ್ಲ.

ಕೊಲೆಯನ್ನು ಜಾತಿನಿಂದನೆ ಕಾರಣಕ್ಕಾಗಿ ಮಾಡಿದ್ದಾರೆ, ಮೇ ತಿಂಗಳಲ್ಲಿ ಚಾಸಾ-1 ರ ತಲೆಯನ್ನು ಇದೇ 13 ಜನರು ತಲ್ವಾರನಿಂದ ಕಡಿದಿದ್ದರು ಹಾಗೂ 3 ಮನೆಗಳನ್ನು ಒಡೆದಿದ್ದರು, ಆ ಬಗ್ಗೆ ಕೇಸು ಮಾಡಿದ್ದು ಅವರೆಲ್ಲರೂ ಜಾಮೀನಿನ ಮೇಲೆ

ಬಂದು ಕೊಲೆ ಮಾಡಿದ್ದಾರೆ, ಆ ಬಗ್ಗೆ ನಮಗೆ ಭಯವಿತ್ತು ಎಂಬ ವಿಷಯನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ, ಆದರೆ ಪೋಲಿಸರು ಬರೆದುಕೊಂಡಿಲ್ಲ.

ದಿನಾಂಕಃ 30-11-2019 ರಂದು ನನ್ನ ಹೇಳಿಕೆಯಲ್ಲಿ ಪೋಲಿಸರ ಮುಂದೆ ಹೇಳುವಾಗ ದಿನಾಂಕಃ 15-10-2019 ರಂದು ಯಾರೋ ಕಾರನಲ್ಲಿ ಬಂದು ಕೊಲೆ ಮಾಡಿ ಹೋಗಿದ್ದು ಅವರು ಯಾರು ಅಂತಾ ನನಗೆ ಗೊತ್ತಿರುವುದಿಲ್ಲ, ನಾನು ಸ್ಥಳದಲ್ಲಿ ಹಾಜರಿರುವುದಿಲ್ಲ ಅಂತಾ ಹೇಳಿಕೆ ನೀಡಿದ್ದೇನೆ ಎನ್ನುವುದು ನಿಜ. ದಿನಾಂಕಃ 15-10-2019 ರಂದು ಸುದ್ದಿ ಬಂದ ಮೇಲೆ ನಾನು ಸ್ಥಳಕ್ಕೆ ಹೋದಾಗ ರೇಖಾ ಮತ್ತು ಕಾಂಚನಾ ಬಂದು 13 ಜನರು ಬಂದು ಅಟ್ಟಾಡಿಸಿ ಕಡಿದಿರುತ್ತಾರೆ ಅಂತಾ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಹೇಳಿಕೆಯಲ್ಲಿ 13 ಜನರ ಹೆಸರು ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 13 ಜನರು ಕಾರನಲ್ಲಿ ಬಂದು ಡಿಕ್ಕಿ ಹೊಡೆಸಿ ಕೆನಾಲ್ ಕಡೆಗೆ ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮೇ ತಿಂಗಳಲ್ಲಿ ಆರೋಪಿತರು ಚಾಸಾ-1 ರ ತಲೆಗೆ ತಲ್ವಾರನಿಂದ ಹೊಡೆದು, 3 ಮನೆ ಮೇಲೆ ದಾಳಿ ಮಾಡಿ, ಜಾತಿ ನಿಂದನೆ ಮಾಡಿದ್ದು ಅವರ ಮೇಲೆ ಕೇಸು ದಾಖಲಿಸಿದ್ದು ನಂತರ ಜಾಮೀನಿನ ಮೇಲೆ ಬಂದು ಅದೇ ಸಿಟ್ಟಿನಿಂದ ಕೊಲೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಿಪಿ-5 ರಿಂದ 8, 40 ರಿಂದ 45 ಪೋಟೋಗಳು ಹಾಗೂ ಮುಮಾ-1 ರಿಂದ 4, 12, 13, 17 ಸುಳ್ಳು ಇರುತ್ತವೆ ಎನ್ನುವುದು ಸರಿಯಲ್ಲ. ವಿಠ್ಠಲ ಮತ್ತು ಮಲೆಪ್ಪ ಇವರು ಬೈಕ ಅಪಘಾತದಲ್ಲಿ ಗಾಯಗೊಂಡಿದ್ದು ಆರೋಪಿತರ ಮೇಲೆ ಸಿಟ್ಟಿನಿಂದ ಚಾಸಾ-1 ರ ಮಾತು ಕೇಳಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

12-06-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.

Spl.C. 3/2020.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.**

| | | | |
|---|---|---|---|
| ಹೆಸರು | : | ಮಹಾಂತೇಶ ತಳಗೇರಿ | ಫ್ರಾಸಾ-14 |
| ತಂದೆಯ ಹೆಸರು | : | ಗಚ್ಚಪ್ಪ | ಚಾಸಾ-25 |
| ವಯಸ್ಸು | : | 27 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ | |

ದಿನಾಂಕಃ 12-06-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನ್ಯಾಯಾಲಯದ ಮುಂದಿರುವ ಆರೋಪಿತರು ಪರಿಚಯ. ಚಾಸಾ-1 ರಿಂದ 4, 16 ರಿಂದ 24,26,27 ನನ್ನ ಸಂಬಂಧಿಕರು.

ಮೇ-2019 ರಂದು ನನ್ನ ಚಿಕ್ಕಪ್ಪನ ಮೂರು ಮನೆಗಳ ಮೇಲೆ ದಾಳಿ ಮಾಡಿದ್ದರು. ಚಾಸಾ-1 ಇವರ ತಲೆಗೆ ತಲ್ವಾರನಿಂದ ಹೊಡೆದಿದ್ದರು. ಆ ವಿಷಯದಲ್ಲಿ ಕೇಸು ದಾಖಲಿಸಿದ್ದೆವು. ಆರೋಪಿತರು ಆ ಕೇಸನಿಂದ ಜಾಮೀನಿನ ಮೇಲೆ ಹೊರಗೆ ಬಂದು ಹೊಲೆಯರು ನಮ್ಮನ್ನು ಒಳಗೆ ಹಾಕಿಸುತ್ತಾರೆ ಅಂತಾ ಹೇಳಿ ನನಗೆ, ಚಾಸಾ-1, 21 ಮತ್ತು 26 ಇವರಿಗೆ ಕೊಲೆ ಮಾಡುತ್ತೇವೆ ಅಂತಾ ಬೆದರಿಕೆ ಹಾಕಿದರು.

ದಿನಾಂಕಃ 14-10-2019 ರಂದು ನನ್ನ ಮೇಲೆ ದ್ವೇಷ ಇಟ್ಟುಕೊಂಡು ಅನೀಲ ರಾಯವಪ್ಪ ಚಿಂಚಲಿ ಎನ್ನುವ ವ್ಯಕ್ತಿ ಟ್ರ್ಯಾಕ್ಟರ ಹಾಯಿಸಲು ಬಂದಿದ್ದ. ಈ ಘಟನೆಯನ್ನು ನನ್ನ ಚಿಕ್ಕಪ್ಪ ವಿಠ್ಠಲನಿಗೆ ಹೇಳಲು ಬಂದಿದ್ದೆ. ಆಗ ವಿಠ್ಠಲ ಏನೂ ಆಗುವುದಿಲ್ಲ ಅಂತಾ ನನಗೆ ಧೈರ್ಯ ಹೇಳಿ ಕಳುಹಿಸಿದ. ದಿನಾಂಕಃ 15-10-2019 ರಂದು ಜನ ಸೇರಿ ನಮ್ಮನ್ನು ಹೊಡೆಯುತ್ತೇವೆ ಅಂತಾ ಹೇಳಿದರು. ಅದರಲ್ಲಿ 13 ಜನರು ಇದ್ದರು. ಅದೇ ದಿನ ನಾನು, ಚಾಸಾ-1,22,24 ಹಾಗೂ ಮಾಳಪ್ಪ, ಮಹೇಶ, ಸೇರಿ ಬೆಳಗ್ಗೆ 10.00 ಗಂಟೆಗೆ ಸಿ.ಪಿ.ಐ ಕಚೇರಿಗೆ ಹೋಗಿದ್ದೆವು. ಸಿ.ಪಿ.ಐ ರವರ

ಮುಂದೆ ನಮಗೆ ಭಯವಿದೆ ಒಂದು ರೌಂಡ ಹಾಕಿ ಬನ್ನಿ ಅಂತಾ ಹೇಳಿದೆವು. ಆದರೆ ಅವರು ರೌಂಡ ಹಾಕಲು ಬರಲಿಲ್ಲ. ಆದರೆ ಅವರು ಮಹೇಶ ನಾಗರೆಡ್ಡಿ ಇವರಿಗೆ ಪೋನ ಮಾಡಿದರು. ಅವನು ರಿಸಿವ್ ಮಾಡಲಿಲ್ಲ. ಸಿ.ಪಿ.ಐ ರವರು ಪಿ.ಎಸ್.ಐ ಕಚೇರಿಗೆ ಹೋಗಲು ತಿಳಿಸಿದರು. ನಾವು ಪಿ.ಎಸ್.ಐ ಮುಧೋಳ ಮೋಕರಿ ಎನ್ನುವವರನ್ನು ಭೇಟಿಯಾದೆವು ಹಾಗೂ ಅವರಿಗೂ ಸಹ ಗುಂಪು ಕಟ್ಟಿಕೊಂಡು ಜನರು ನಮ್ಮನ್ನು ಕಡಿಯುತ್ತಾರೆ ನಮಗೆ ಭಯವಿದೆ ಎಂದು ಹೇಳಿದರು. ಆಗ ಅವರು ಕಡಿಯಲು ನಿಮ್ಮನ್ನು ಬದನೆಕಾಯಿ ಮಾಡಿದ್ದಾರೇನು? ಅಂತಾ ಹೇಳಿದರು ಹಾಗೂ ಅವರೂ ಸಹ ಬರಲಿಲ್ಲ. 3.30-4.00 ಗಂಟೆವರೆಗೂ ಠಾಣೆಯಲ್ಲಿಯೇ ಇದ್ದೆವು. ಆಗ ನನ್ನ ಚಿಕ್ಕಪ್ಪ ಪೋನ ಮಾಡಿ ಅಯ್ಯೋ ಮಹಾಂತೇಶ ಕಡಿಯುತ್ತಿದ್ದಾರೆ ಅಂತಾ ಹೇಳಿದ. ನಾವು ಭಯಪಟ್ಟುಕೊಂಡು ಟೀ ಹೊಟೇಲ್ ಹತ್ತಿರ ನಿಂತೆವು. ನನ್ನ ಚಿಕ್ಕಪ್ಪನ ಪೋನ ನಂ.9986708227 ಇರುತ್ತದೆ.

ನಂತರ ದಸ್ತಗಿರಸಾಬ ಚಾಸಾ-29 ಇವರು ನನ್ನ ಚಿಕ್ಕಪ್ಪ ಯಲ್ಲಪ್ಪ ಚಾಸಾ-1 ಇವರಿಗೆ ಪೋನ ಮಾಡಿ ನಿನ್ನ ಚಿಕ್ಕಪ್ಪ ಮಲೆಪ್ಪ ಮತ್ತು ವಿಠ್ಠಲ ತಳಗೇರಿ ಇವರನ್ನು ಕೊಚ್ಚಿ ಕೊಲೆ ಮಾಡಿದ್ದಾರೆ ಬನ್ನಿ ಅಂತಾ ಹೇಳಿದರು. ನಂತರ ನಾನು ಪಿ.ಎಸ್.ಐ ರವರಿಗೆ ಕೊಲೆ ವಿಷಯ ತಿಳಿಸಿದೆ ಹಾಗೂ ನೀವು ರೌಂಡ ಹಾಕಿದ್ದರೆ ಕೊಲೆಯಾಗುತ್ತಿರಲಿಲ್ಲ ಅಂತಾ ಹೇಳಿದೆ.

ನಂತರ ನಾವು ಟೀ ಹೊಟೇಲ್ ಹತ್ತಿರವಿದ್ದಾಗ ಮಹೇಶ ನಾಗರೆಡ್ಡಿ, ಗಿರಿಮಲ್ಲಯ್ಯ ಗಣಾಚಾರಿ, ವಿಠ್ಠಲ ಕಂದಗಲ್, 2 ಕಾರನಲ್ಲಿ ಪೋಲಿಸಠಾಣೆಗೆ ಬಂದರು. ನಂತರ ನಾವು ಘಟನಾ ಸ್ಥಳಕ್ಕೆ ಬಂದು ನೋಡಿದೆವು. ವಿಠ್ಠಲನ ಬಲತಲೆಗೆ, ಬಲಕುತ್ತಿಗೆ, ಬಲಕಿವಿ ಹಾಗೂ ಬಲಗೈ ಹಾಗೂ ಎಡಗೈ ಬೆರಳುಗಳನ್ನು ಕಡಿದಿದ್ದರು ಹಾಗೂ ಅವನನ್ನು ಗಣಿ ಅವರ ತೋಟದ ಕೆನಾಲ್ ನಲ್ಲಿ ಒಗೆದಿದ್ದರು.

ನಂತರ ಮಲೆಪ್ಪನನ್ನು ನೋಡಿದೆವು. ಅವನ ಎಡಕುತ್ತಿಗೆ ಕಡಿದಿದ್ದರು, ರಕ್ತದ ಮಡುವಿನಲ್ಲಿ ಬಿದ್ದಿದ್ದ. ಆ ಕುರಿತು ನಿಪಿ-5 ರಿಂದ 8 ಪೋಟೋಗಳನ್ನು

ನೋಡಿ ಗುರುತಿಸಿದ್ದೇನೆ. ನನ್ನ ಚಿಕ್ಕಪ್ಪ ವಿಠ್ಠಲನ ಮೊಬೈಲ ಸ್ಯಾಮಸಂಗ್ ಕಂಪನಿಯದ್ದು ಸ್ಥಳದಲ್ಲಿ ಬಿದ್ದಿತ್ತು. ಸದರಿ ಸ್ಯಾಮಸಂಗ್ ಕೀ ಪ್ಯಾಡ್ ಮೊಬೈಲ ನೋಡಿ ಮುಮಾ-23 ಅಂತಾ ಗುರುತಿಸಲಾಯಿತು. ಮೊಬೈಲ ಪೋಟೋವನ್ನು ನಿಪಿ-40 ಅಂತಾ ಈಗಾಗಲೇ ಗುರುತಿಸಲಾಗಿದೆ.

ರೇಣುಕಾ ಮತ್ತು ಕಾಂಚನಾ ಇವರು 13 ಜನರು ಒಂದು ಕಾರ ಮತ್ತು ಎರಡು ಬೈಕ ಮತ್ತು ಒಂದು ರಾಯಲ್ ಎನಫೀಲ್ಡ್ ನಲ್ಲಿ ಬಂದು ತಲ್ವಾರನಿಂದ ಕೊಲೆ ಮಾಡಿದ್ದಾರೆ ಅಂತಾ ಹೇಳಿದರು. ನಿಪಿ-3 ಪೋಟೋ ನೋಡಿ ಗುರುತಿಸಿದ್ದೇನೆ. ದಿನಾಂಕಃ 30-11-2019 ರಂದು ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ.

ಟ್ರ್ಯಾಕ್ಟರ ಹಾಯಿಸಿದ ಬಗ್ಗೆ ಮತ್ತೊಂದು ಕೇಸು ಆಗಿದೆ. ಟ್ರ್ಯಾಕ್ಟರ ಹಾಯಿಸಿದ ಬಗ್ಗೆ ಪಿರ್ಯಾದಿ ಕೊಡಲು 15 ನೇ ತಾರೀಖಿಗೆ ಹೋಗಿದ್ದೆವು. ಕೇಸು ಕೊಲೆಯಾದ ನಂತರ ಕೊಟ್ಟಿರುತ್ತೇವೆ. ಮುಮಾ-1 ರಿಂದ 4 ನೋಡಿ ಗುರುತಿಸಿದ್ದೇನೆ. ನಿಪಿ-41 ರಿಂದ 43 ಹಾಗೂ 45 ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ದಿನಾಂಕಃ 30-11-2019 ರಂದು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ 13 ಜನ ಗುಂಪು ಸೇರಿದ್ದಾರೆ ಅಂತಾ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ ಹಾಗೂ ಆರೋಪಿತರು ನಮ್ಮನ್ನು ಕೊಲೆ ಮಾಡುತ್ತಾರೆ ನಮಗೆ ಭಯವಿದೆ ಎಂಬ ವಿಷಯವನ್ನು ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ.

ದಿನಾಂಕಃ 14-10-2019 ರಂದು ಅನೀಲ ಟ್ರ್ಯಾಕ್ಟರ ಹಾಯಿಸಲು ಬಂದ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ. ದಿನಾಂಕಃ 15-10-2019 ರಂದು ಸಿ.ಪಿ.ಐ ಕಚೇರಿಗೆ ನಾನು ಹಾಗೂ ಇತರರು ಹೋಗಿ ನಮಗೆ ಭಯವಿದೆ ರೌಂಡ ಹಾಕಿ ಬನ್ನಿ ಅಂತಾ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ.

ನಂತರ ಪಿ.ಎಸ್.ಐ ಕಚೇರಿಗೆ ನಾನು ಹಾಗೂ ಇತರರು ಹೋಗಿ ನಮಗೆ ಭಯವಿದೆ ರೌಂಡ ಹಾಕಿ ಬನ್ನಿ ಅಂತಾ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ.

03.20 ಕ್ಕೆ ನನ್ನ ಚಿಕ್ಕಪ್ಪ ವಿಠ್ಠಲ ಪೋನ ಮಾಡಿ ಕಡಿಯುತ್ತಿದ್ದಾರೆ ಮಹಾಂತೇಶ ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ. ನನ್ನ ಚಿಕ್ಕಪ್ಪನ ಪೋನ ನಂಬರು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ.

ಸುಮಾರು 4.00 ರಿಂದ 4.10 ರ ಸುಮಾರಿಗೆ ಮಹೇಶ ನಾಗರೆಡ್ಡಿ, ಗಿರಿಮಲ್ಲಯ್ಯ ಗಣಾಚಾರಿ ಮತ್ತು ವಿಠ್ಠಲ ಕಣಗಲ್ 2 ಕಾರನಲ್ಲಿ ಬಂದರು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ.

ಸ್ಥಳದಲ್ಲಿ ನನ್ನ ಚಿಕ್ಕಪ್ಪನ ಮೊಬೈಲ ಬಿದ್ದಿತ್ತು ಅಂತಾ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ. 13 ಜನರು ಒಂದು ಕಾರ, ಒಂದು ಬೈಕು ಹಾಗೂ ಒಂದು ರಾಯನ ಎನಫೀಲ್ಡನಲ್ಲಿ ಬಂದಿದ್ದರು ಎಂಬ ವಿಷಯವನ್ನು ರೇಣುಕಾ ಮತ್ತು ಕಾಂಚನಾ ನಮ್ಮ ಮುಂದೆ ಹೇಳಿದ್ದಾರೆ ಎಂಬ ವಿಷಯವನ್ನು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ ಹಾಗೂ ತಲ್ವಾರನಿಂದ ಕೊಲೆ ಮಾಡಿದ್ದಾರೆ ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ.

ಅದೇ ದಿನ ಸಾಯಂಕಾಲ 6.00 ಗಂಟೆಗೆ ರೇಣುಕಾ ಮತ್ತು ಕಾಂಚನಾ ನನಗೆ ಸ್ಥಳದಲ್ಲಿ ಭೇಟಿಯಾಗಿದ್ದರು. ದಿನಾಂಕಃ 30-11-2019 ರಂದು ನನ್ನ ಹೇಳಿಕೆಯಲ್ಲಿ 13 ಜನರು ಬಂದಿದ್ದರು ಅಂತಾ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ ಆದರೆ ಪೋಲಿಸರು ಬರೆದುಕೊಂಡಿಲ್ಲ.

ದಿನಾಂಕಃ 22-10-2019 ರಂದು ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ. ಅದರಲ್ಲಿ ಕೊಲೆ ಮಾಡಿದ ಆರೋಪಿತರು ಯಾರು ಅಂತಾ ನನಗೆ ಗೊತ್ತಿಲ್ಲ, ಏಕೆಂದರೆ ನಾನು ಸ್ಥಳದಲ್ಲಿರಲಿಲ್ಲ ಎಂದು ಹೇಳಿದ್ದೇನೆ ಎನ್ನುವುದು ನಿಜ.

ನನಗೆ ಟ್ರ್ಯಾಕ್ಟರ ಹಾಯಿಸಲು ಬಂದಿರುವುದರಿಂದ ಆರೋಪಿತರಿಂದ ನಮಗೆ ಕೊಲೆ ಬೆದರಿಕೆ ಇದೆ ಅಂತಾ ಸಿ.ಪಿ.ಐ ಕಚೇರಿಗೆ ಹೇಳಲು ಹೋಗಿಲ್ಲ ಎನ್ನುವುದು ಸರಿಯಲ್ಲ. ಸಿ.ಪಿ.ಐ ರವರಿಗೆ ರೌಂಡ್ಸ ಹಾಕಲು ಹೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಿ.ಪಿ.ಐ ಮಹೇಶ ನಾಗರೆಡ್ಡಿ ಇವರಿಗೆ ಪೋನ ಮಾಡಿದ್ದರು ಅದು ಸ್ವಿಚ್ ಆಫ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಿ.ಪಿ.ಐ ರವರು ಪಿ.ಎಸ್.ಐ ರವರಿಗೆ ರೌಂಡ್ಸ ಹಾಕಲು ಹಾಗೂ ರಕ್ಷಣೆ ಕೊಡಲು ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾವು ಠಾಣೆಯಲ್ಲಿದ್ದಾಗ ನನ್ನ ಚಿಕ್ಕಪ್ಪ ಪೋನ ಮಾಡಿ ಕಡಿಯುತ್ತಿದ್ದಾರೆ ಅಂತಾ ಹೇಳಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-29 ಪೋನ ಮಾಡಿ ನಿನ್ನ ಚಿಕ್ಕಪ್ಪನಿಗೆ ಕೊಲೆ ಮಾಡಿದ್ದ ವಿಷಯವನ್ನು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸ್ಥಳದಲ್ಲಿ ಮುಮಾ-1 ರಿಂದ 4 ಬಿದ್ದಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರೇಣುಕಾ ಮತ್ತು ಕಾಂಚನಾ 13 ಜನರು ಕಾರ ಮತ್ತು ಬೈಕಗಳಲ್ಲಿ ಬಂದು ತಲ್ವಾರನಿಂದ ಹೊಡೆದು ಕೊಲೆ ಮಾಡಿದ ವಿಷಯ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅನೀಲ ಚಿಂಚಲಿ ಟ್ರ್ಯಾಕ್ಟರ ಹಾಯಿಸಲು ಬಂದಿದ್ದರು ಆ ಬಗ್ಗೆ ಮರುದಿನ ಪಿರ್ಯಾದಿ ಕೊಡಲು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮಲ್ಲೆಪ್ಪ ಮತ್ತು ವಿಠ್ಠಲ ಮೋಟರ ಸೈಕಲ ಮೇಲಿಂದ ಬಿದ್ದು ಅಪಘಾತ ಮಾಡಿಕೊಂಡರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

12-06-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.